905

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾರ್ ನಾಮೆ.

ತಾರೀಖು 16ನೇ ಅಕ್ಟೋಬರ್ 1884.

ಸ್ರ 1884ನೇ ಇಸವಿ ನವಂಬರ್ ಗುರ್ತೇ ಲಾಗಾಯತು ಸ್ರ 1885ನೇ ಇಸವಿ ಅಕ್ಟೋಬರ್ 31ನೇ ತಾರೀಖು ವರಿಗೆ ಒಂದು ಸಾಲ್ ವರಿಗೆ ದೇವರಾಯದುರ್ಗದ ಫಾರೆಸ್ಟ್‌ನಿಂದ ತುಮಕೂರು ರೈಲ್ವೇ ಸ್ಟೇಷನಿಗೆ (ಫಾಸಲೆ 8ರ ಲಾಗಾಯತು 12 ಮೈಲ್) ಮಾಹೆಯಾ ನಾ 200ರ್ ಅಥವಾ ಜಾಸ್ತಿ ಸಾದೆ ಸರಬರಾಯಿ ಮಾಡುವ ಬಗ್ಯೆ ಸ್ರ ಮಜಕೂರ್ ನವಂಬರ್ 10ನೇ ತಾರೀಖು ವರಿಗೆ ಈ ಆಫೀಸಿನಿಂದ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ತೆಗಿಯಲ್‌ಪಡುವವು.

2. ಕಂಟ್ರಾಕ್ಟುದಾರನು ಪ್ರತಿತಿಂಗಳ ಗುರ್ತೇ ತಾರೀಖಿಗೆ ಮೇಲೆ ನಮೂದಿಸಿದ ಮೊತ್ತದ ಸಾದೆಯನ್ನ ತುಮಕೂರು ಸ್ಟೇಷ್‌ನಲ್ಲಿ ಕೊಡಬೇಕು. ಈರೀತಿ ನಡಿಸತಕ್ಕ ಬಗ್ಯೆ ಕಂಟ್ರಾಕ್ಟುದಾರನು ಮೊದಲು ತಿಂಗಳಿಗೆ ಸಪ್ಲೈಮಾಡಬೇಕಾದ ಸಾದೆಯನ್ನ ಮುಂಚಿತವಾಗಿ ಸ್ಟೇಷ್‌ನ್‌ಲ್ಲಿ ಜಮೊಯಿಸಿಕೊಂಡಿರಬಹುದು.

3. ಗಿಡಗಳು ಕತ್ತಾಯಿಸತಕ್ಕ ವಿಧ ಮತ್ತು ಸಾದೆ ಕತ್ತಾಯಿಸುವ ಜಾಗ ಸಹ ಫಾರೆಸ್ಟು ಇಲಾಖೆಯವರಿಂದ ಗೊತ್ತು ಮಾಡಲ್ಪಡುತ್ತೆ.

4. ಕಂಟ್ರಾಕ್ಟಿನ ಪರತ್ತುಗಳು ದೇಖೀಲ್ ಹೆಚ್ಚಿಗೆ ತಪಸೀಲ್‌ಗಳು ಈ ಆಫೀಸಿನಿಂದ ಮೊಖ್ತಾ ಆಗಲಿ ಅಥವಾ ಅರ್ಜೀ ಮೂಲಕವೇ ಆಗಲಿ ತಿಳಿದುಕೊಳ್ಳಬಹುದು.

5. ತುಮಕೂರು ಸ್ಟೇಷನಿಗೆ ಸಾದೆಯು ರ್ಟ ವಂದಕ್ಕೆ ಯಾವ ಕಮ್ಮಿ ದರಕ್ಕೆ ಕಂಟ್ರಾಕ್ಟುದಾರ್ರು ಸರಬರಾಯಿ ಮಾಡಲು ಒಪ್ಪುತ್ತಾರೋ ಅಂಥಾ ಕಮ್ಮಿ ದರವನ್ನ ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಡಬೇಕು, ನಗದಾಗಿಯಾಗಲಿ ಕರೆನ್ಸಿನೋಟ್‌ಗಳ ಮೂಲಕವಾಗಿಯಾಗಲಿ (50) ರೂಪಾಯಿಗಳ ಡಿಪಾಜಿಟ್ ದರಖಾಸ್ತು ವಜನೆ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತೂ ತೆಗದುಕೊಳ್ಳುವದಿಲ್ಲ. ಸಾದೆ ಕಡಿಯುವಣ, ಕುಯ್ಯುವಣ, ಸಾಗಿಸೋಣ, ರೈಲ್ವೇ ಸ್ಟೇಷ್‌ನಲ್ಲಿ ಫೇರಿಸೋಣ, ಯಿವುಗಳಿಗೆ ಸಂಬಂಧಪಟ್ಟ ತಮಾಂ ಖರ್ಚುಗಳೂ ದರಗಳಲ್ಲಿ ಕೇರಿ ಯಿರತಕ್ಕದ್ದು.

6. ಯಿದರಡೀ ರುಜುಮಾಡಿ ಯಿರುವವರಿಂದ ಯಾ ಅವರಿಂದ ನೇಮಿಸಲ್ಪಟ್ಟ ಆಫೀಸರಿಂದ ಅವರ ಆಫೀಸಿನಲ್ಲಿ ಸ್ರ ಮಜಕೂರ್ ನವಂಬರ್ 10ನೇ ತಾರೀಖು ಮಧ್ಯಾನ್ನ ಹಾಜರಾಗಲಿಕ್ಕೆ ಯಿಚ್ಛೈಸುವ ದರಖಾಸ್ತುದಾರ್ರ ರೂಬರೂ ದರಖಾಸ್ತುಗಳು ಖುಲ್ಲಾ ಮಾಡಲ್ಪಡುವವು.

7. ಇದರಡೀ ರುಜುಮಾಡಿ ಯಿರತಕ್ಕವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸಲಿಕ್ಕೆ ಯಾವ ಸಬಬನ್ನೂ ತಿಳಿಸದೇಲೇ ಹಾಗೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

8. ಯಾವ ಪೋಟೂಪೋಟಿ ದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅಂಥವನ ಡಿಪಾಜಿಟ್ ಪೊಬಲಗು ಉಳಿಸಿಕೊಳ್ಳಲ್ಪಟ್ಟು ಅವನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ತನಿಗೆ ತಿಳಿಸಿದ ತಾರೀಖು ಮೊದಲು ಒಂದು ವಾರದ ಒಳಗಾಗಿ ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡಲಿಕ್ಕಾಗಿ ಅಥವಾ ತನ್ನ ಕಂಟ್ರಾಕ್ಟು ಸರಿಯಾಗಿ ನೆರವೇರಿಸುವ ಬಗ್ಯೆ ನಗದಾಗಿ 300 ರೂಪಾಯಿಗಳ ಠೇವಣಿ ಹಾಜರ್ ಮಾಡುವದಕ್ಕಾಗಲಿ ತಪ್ಪಿದರೆ ಅವನ ಡಿಪಾಜಿಟ್ ದಂಡವಾಗಿ ತೆಗದುಕೊಳ್ಳಲ್ಪಡುವದು.

9. ದರಖಾಸ್ತುಗಳ ಮೇಲೆ "ಮೈಸೂರು ಸ್ಟೇಟ್ ರೈಲ್‌ವೇಗೆ ಸಾದೆ ಸರಬರಾಯಿ ದರಖಾಸ್ತುಗಳು" ಯೆಂದು ಮೇಲ್ವಿಳಾಸಬರಿಯತಕ್ಕದ್ದು.

10. ದರಖಾಸ್ತುದಾರ ತನ್ನ ಮೊದಲನೇ ಸರಬರಾಯಿಯನ್ನು ಸ್ರ 1884ನೇ ಇಸವಿ ಡಿಸಂಬರ್ 1ನೇ ಮುರ್ತು ಮಿನಲ್ಲಿ ಮಾಡತಕ್ಕದ್ದು.

ಪಿ. ಎ. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

2 c